## ಇಲ್ಲಿಯವರೆಗೆ



ಆಸ್ಪತ್ರೆಯಲ್ಲಿದ್ದ ರಾಯರು ಡಿಸ್ಚಾರ್ಜ್ ಆಗಿ ಮನೆಗೆ ಬರುತ್ತಾರೆ. ವಸುಮತಿ, ಶಂಕರ ಊರಿಗೆ ಮರಳುತ್ತಾರೆ. ಸೂರ್ಯ ಮನೆಯಿಂದ ತೆಗೆದುಕೊಂಡು ಹೋದ ಹಣವನ್ನು ಅಪೂರ್ವ ಆದರ್ಶನ ಸಹಾಯದಿಂದ ಪೊಲೀಸರ ಜತೆಗೂಡಿ ಪತ್ತೆ ಹಚ್ಚಿ ತರುತ್ತಾರೆ. ಸೂರ್ಯನನ್ನು ಮನೆಗೆ ಕರೆದುಕೊಂಡು ಬರುತ್ತಾರೆ. ತಂದೆ ಕ್ಷಮಿಸಿದ್ದು ಮನೆಯಲ್ಲೇ ಇರುವಂತೆ ಸೂರ್ಯನನ್ನು ಕೋರುತ್ತಾರೆ. ವಿಜಯಮ್ಮನಿಗೆ ಸಂಭ್ರಮ, ಸಡಗರ ಉಂಟಾಗುತ್ತದೆ. ಅಪೂರ್ವ ಸೂರ್ಯನನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ತಾನು ಎಷ್ಟೇ ಕೆಟ್ಟದಾಗಿ ವರ್ತಿಸಿದರೂ ಅಪೂರ್ವ ತಾಳ್ಮೆ ಕೆಡದೆ ಇದ್ದದ್ದು ಸೂರ್ಯನಿಗೆ ಆಶ್ಚರ್ಯ ತರುತ್ತದೆ.

ಸಂದರ್ಭದಲ್ಲಿ ಜೀವನದ ದೊಡ್ಡ ಪಾಠ ಕಲಿಯುತ್ತೇವೆ. ತಾನು ಪಶ್ಚಾತ್ತಾಪದಿಂದ ದಗ್ಧವಾದ ಭಾವನೆಯಲ್ಲಿ ವರ್ಷಗಳೇ ಜೈಲಿನ ನಾಲ್ಕು ಗೋಡೆಗಳ ನಡುವೆ ಕೊಳೆಯುತ್ತಿದ್ದೆ.

ಜೈಲಿನಿಂದ ಬಿಡುಗಡೆಯಾಗಿ ಹೊರ ಬಂದಾಗಲೂ ನನ್ನ ಕರೆದೊಯ್ಯಲು ಯಾರೂ ಬಂದಿರಲಿಲ್ಲ. ಅವರ ಹಾದಿ ಕಾಯುತ್ತ ಬಹಳ ಹೊತ್ತು ಮುಖ್ಯ ದ್ವಾರದ ಬಳಿ ಕುಳಿತಿದ್ದೆ. ನನ್ನ ನಿರೀಕ್ಷೆ ಹೊತ್ತು ಸರಿದಂತೆಲ್ಲಾ ಹುಸಿಯಾಗ ತೊಡಗಿತ್ತು. ಅಪ್ಪನ ಹಠ, ಅವರ ದೃಢ ನಿಲುವಿನ ನೆನಪಾದಂತೆಲ್ಲಾ ಮನದಲ್ಲಿ ನಿರಾಶೆ ಕವಿಯ ತೊಡಗಿತ್ತು. ಜೈಲಿನಿಂದ ಅಂದೇ ಬಿಡುಗಡೆ ಯಾದ ಗೋಪಿ ನನ್ನನ್ನು ತನ್ನ ಸಂಗಡ ಕರೆದೊಯ್ದಿದ್ದ. ಹುಲಸೂರಿಯಿಂದ ಹತ್ತು ಕಿ.ಮೀ. ದೂರದಲ್ಲಿದ್ದ ದೇವಿಯ ಗುಡಿಯ ಹಿಂದಿನ ವಠಾರದ ಮನೆಯಲ್ಲಿ ನಾವು ವಾಸಿಸತೊಡಗಿದ್ದವು. ಮಾಡಲು ಉದ್ಯೋಗವಿರಲಿಲ್ಲ. ಕೈಯಲ್ಲಿ ನಯಾ ಪೈಸೆ ಇರಲಿಲ್ಲ. ಈ ಹತ್ತು ವರ್ಷಗಳ ಅವಧಿಯಲ್ಲಿ ಊರು ತುಂಬಾ ಬದಲಾಗಿತ್ತು. ನಮ್ಮ ಮನೆಯನ್ನು ಅರಸಿ ಹೋಗಬೇಕೆಂದು ಅನ್ನಿಸುತ್ತಿದ್ದರೂ, ನಾನು ಬೇಡ ಎಂದು ದೂರ ಮಾಡಿದವರಿಗಾಗಿ ನಾನೇಕೆ ತುಡಿಯಲಿ ಎನಿಸಿ ನನ್ನನ್ನು ನಾನು ನಿಯಂತ್ರಿಸಿಕೊಳ್ಳುತ್ತಿದ್ದೆ. ಅಮ್ಮನ ನೆನಪಾಗುತ್ತಿತ್ತು. ಆಕೆಯ ಮಡಿಲಲ್ಲಿ ತಲೆಯಿರಿಸಿ ಅಳಬೇಕು. ಮಾಡಿದ ತಪ್ಪಿಗೆ, ಅವಳಿಗೆ ನೀಡಿದ ವೇದನೆಗೆ ಕ್ಷಮೆ ಕೇಳಬೇಕು ಎಂದೆನ್ನಿಸುತ್ತಿತ್ತು. ಆಗೆಲ್ಲ ಅಪ್ಪನ ರೌದ್ರ ಮುಖ ನೆನಪಾಗುತ್ತಿತ್ತು. ಅವರ ಶಿಸ್ತು, ಅವರ ಕಠಿಣ ನಿಲುವು ನೆನೆದಾಗ ಭಯದಿಂದ ಮನೆಗೆ ಹಿಂತಿರುಗುವುದು ಬೇಡವೆನಿಸುತ್ತಿತ್ತು. ಆದರೂ ಅಮ್ಮನನ್ನು, ಅಪ್ಪನನ್ನು ನೋಡಬೇಕೆಂಬ ಆಸೆ ಜೀವನೋಪಾಯಕ್ಕೆ ಆ ದೇವಿ ಗುಡಿಯ ಬಳಿಯಿದ್ದ ತರಕಾರಿ ಮಾರುಕಟ್ಟೆ ಯಲ್ಲಿ ಬೆಳಿಗ್ಗೆ ಹಾಸನದ ಕಡೆಯಿಂದ ಬರುವ ತರಕಾರಿ ಲೋಡನ್ನು ಖಾಲಿ ಮಾಡುತ್ತಿದ್ದೆವು. ಆ ಮೂಟೆಗಳನ್ನೆಲ್ಲಾ ಎಂಟು ಗಂಟೆಯೊಳಗೆ ಖಾಲಿ ಮಾಡಿದರೆ ಆ ದಿನದ ಕೆಲಸ ಮುಗಿಯಿತು! ಆನಂತರ ಇಡೀ ದಿನ ಬಿಡುವು. ಗೋಪಿ ಮತ್ತು ಅವನ ಗೆಳೆಯರು ಕಳ್ಳತನದ ಸ್ಕೆಚ್ ಹಾಕಿದರೆ, ನಾನು ಅವರೊಂದಿಗೆ ಬೆರೆಯುತ್ತಿರಲಿಲ್ಲ. ಮನಸ್ಸನ್ನು ಕವಿದ ನಿರಾಶೆ ನನ್ನನ್ನು ಮಂಕಾಗಿಸುತ್ತಿತ್ತು. ಆಗೆಲ್ಲ ಯಾವುದೋ ದೇವಸ್ಥಾನದ ಬಳಿ ಹೋಗಿ ದಿನವಿಡೀ ಕುಳಿತು ಬಿಡುತ್ತಿದ್ದೆ. ಮಾಡಿದ ಪಾಪ ಕಳೆಯಲಿ ಎಂದೋ, ಪಶ್ಚಾತ್ತಾಪಕ್ಕೆಂದೋ ದೇವಳದ ಮೆಟ್ಟಿಲುಗಳಲ್ಲಿ ಭಿಕ್ಷೆ ಬೇಡುತ್ತಿದ್ದೆ.

ಹೀಗೇ ನಾಲ್ಕು ವರ್ಷಗಳು ಕಳೆದಿದ್ದವು. ಹೀಗಿರುವಾಗಲೇ ಲಕ್ಷ್ಮೀ ನರಸಿಂಹ ದೇವಳದ ಮೆಟ್ಟಿಲುಗಳಲ್ಲಿ ಕುಳಿತಾಗ ಅಮ್ಮ ಕಾಣಲು ಸಿಕ್ಕಿದ್ದು..ಇಷ್ಟು ದಿನಗಳಿಗೆ ನಾನು ನಿಯಂತ್ರಿಸಿಕೊಂಡ ಸಂಯಮ ಒಡೆದು ಹೋಗಿತ್ತು. ಅಪ್ಪ ಆಗಾಗ ಇದೇ ದೇವಸ್ಥಾನಕ್ಕೆ ಕರೆ ತರುತ್ತಿದ್ದ ನೆನಪು. ಅದೇ ಜಾಡು ಹಿಡಿದು ಹುಡುಕಿ, ಅಲ್ಲಲ್ಲಿ ಅಪ್ಪನ ಹೆಸರು ವಿಚಾರಿಸಿ ಹೋದಾಗ ಮನೆ ಕಾಣಲು ಸಿಕ್ಕಿದ್ದು..ಅಮ್ಮ ನನ್ನ ಒಳ ಕರೆದೊಯ್ದದ್ದು..ಸೂರ್ಯನ ಮನಸ್ಸು ಹಳೇ ನೆನಪುಗಳ ಜೋಕಾಲಿಯಲ್ಲಿ ಜೀಕತೊಡಗಿತ್ತು.

ಅದೇ ದಿನ ಸಂಜೆ ಡಾ. ಆದರ್ಶ ತನ್ನ ತಾಯಿ ವಿದ್ಯಾರೊಡನೆ ರಾಯರ ಆರೋಗ್ಯ ವಿಚಾರಿಸಲು ಬಂದಿದ್ದ. ಒಳ ಬಂದೊಡನೆ ಅವನ ಕಂಗಳು ಅಪೂರ್ವಳಿಗಾಗಿ ಅರಸತೊಡಗಿದ್ದವು. ಸೂರ್ಯನಿಗೆ ಅವನ ಕಣ್ಣೋಟದ ಹುಡುಕಾಟ ಅರಿವಾಗಿತ್ತು.

'ಹೇಗಿದ್ದೀಯಾ.. ಸೂರ್ಯ?' ಆದರ್ಶ ಸಲುಗೆಯಿಂದ ಮಾತನಾಡಿಸಿದ್ದ.

'ಬಾರಪ್ಪಾ ಆದರ್ಶ.. ಬಾ ವಿದ್ಯಾ.. ಬಹಳ ಅಪರೂಪವಾಗಿ ಹೋದೆ ನೀನು..!' ವಿಜಯಮ್ಮ ಆದರ್ಶನ ತಾಯಿಯನ್ನು ಆದರಿಸಿದರು.

'ನಿಮ್ಗೊತ್ತಿದ್ಯಲ್ವಾ ಅತ್ತಿಗೆ.. ಮನೆ ಕೆಲಸ ಮುಗಿಯೋದೇ ಇಲ್ಲ.. ಆದರ್ಶ ನಿಗೊಂದು ಮದ್ವೆ ಆಗೋ ತನಕ ಇದೇ ಪಾಡು ..ಅಣ್ಣ ಹೇಗಿದ್ದಾರೆ? ಇವ್ನು ಡ್ಯೂಟಿ ಮುಗಿಸಿ ಬಂದ ತಕ್ಷಣ ನನ್ನ ಕರ್ಕೊಂಡು ಬಂದ'

'ಈಗ ಪರ್ವಾಗಿಲ್ಲ ವಿದ್ಯಾ.. ಬಾ.. ಮಾತನಾಡಿಸು' ಆದರ್ಶ, ತಾಯಿಯೊಡನೆ ರಾಯರ ಕೋಣೆಗೆ ಹೋಗಿ ಅವರನ್ನು ಮಾತನಾಡಿಸಿದ್ದ.

ಸೂರ್ಯನನ್ನುದ್ದೇಶಿಸಿ,'ಇವ್ನು ಸೂರ್ಯ ಅಲ್ವಾ..?ಯಾವಾಗ ಬಂದ? ಈಗ ನಿಮ್ಜೊತೆನೇ ಇದ್ದಾನಾ..?' ವಿದ್ಯಾ ಕುತೂಹಲ ತೋರಿಸಿದರು. ಸೂರ್ಯನಿಗೆ ಅಲ್ಲಿ ಕುಳಿತಿರಲು ಇರುಸುಮುರುಸಾಗಿತ್ತು. ಅವನ ಚಡಪಡಿಕೆ ಕಂಡು ರಾಯರು, 'ಅವ್ನೆಲ್ಲಿ ಹೋಗ್ತಾನೆ? ಅವ್ನ ಮನೆ ತಾನೇ ಇದು.. ಇಲ್ಲೇ ಇರ್ತಾನೆ', ಅವನಿಗೆ ಕಣ್ಣಲೇ ಬೆಂಬಲ ನೀಡುವಂತೆ ಸಂಜ್ಞೆ ಮಾಡುತ್ತಾ ನುಡಿದರು.

'ಅದೂ ಹೌದು ಅನ್ನು ಅಣ್ಣ ..ನಿಮ್ಗೆ ಈ ವಯಸ್ಸಲ್ಲಿ ಯಾರಾದ್ರೂ ಒಬ್ರು ಜೊತೆಗೆ ಬೇಕಲ್ವಾ..? ಮತ್ತೆ ಇನ್ಯಾರೋ ಹುಡ್ಗೀನ್ನ ಮನೇಲೇ ಇಟ್ಕೊಂಡು ಕಲಿಸ್ತಿದ್ದೀರಂತೆ'

'ಹೌದು' ವಿಜಯಮ್ಮ ಇನ್ನೇನು ಹೇಳುತ್ತಿದ್ದರೋ, ಅಷ್ಟರಲ್ಲಿ ಆದರ್ಶ ತಾಯಿಯನ್ನು ತಡೆದ,'ಅಮ್ಮಾ.. ನೀನು ಅವರ ಮನೆ ವರದಿ ತಿಳಿಯಲು ಬಂದಿದ್ಯಾ ಅಥವಾ ನಿನ್ನಣ್ಣನ ಆರೋಗ್ಯ ವಿಚಾರಿಸಲಾ?'ಅಸಮಾಧಾನದಿಂದ ಆಕ್ಷೇಪಿಸಿದ.

'ನೀನು.. ಆ ಹುಡ್ಗಿ ಗುಣಗಾನ ಮಾಡ್ತಿದ್ಯಲ್ವಾ.. ನೋಡೋಣ ಅನ್ನಿಸ್ತು.. ಇಲ್ವಾ ಅವ್ಳು?' ಅತ್ತಿತ್ತ ಕಣ್ಣಾಡಿಸಿದರು. ವಿಜಯಮ್ಮ ಹೋಗಿ ಅಪೂರ್ವಳನ್ನು ಕರೆ ತಂದರು. ಅವಳನ್ನು ಕಂಡೊಡನೆ ಆದರ್ಶನ ಮುಖವರಳಿತು. 'ಹೇಗಿದ್ದೀರಾ ಅಪೂರ್ವ?'

ಅವಳು ಬರೀ ನಕ್ಕಳಷ್ಟೇ. ವಿದ್ಯಾ ಅವಳನ್ನು ಅಡಿಯಿಂದ ಮುಡಿಯವರೆಗೂ ಪರೀಕ್ಷಾತ್ಮಕವಾಗಿ ದಿಟ್ಟಿಸಿದ್ದರು.

'ಅತ್ತಿಗೆ.. ನಿಮ್ಮ ಹೃದಯವಂತಿಕೆ ಮೆಚ್ಚಿಕೊಳ್ಳಲೇಬೇಕು. ಹೀಗೆ ಯಾರೋ ಗುರುತು ಪರಿಚಯ ಇಲ್ಲದ ಹುಡ್ಗೀನ್ನ ಮನೆಯಲ್ಲಿರಿಸಿಕೊಂಡು ಇಂಜಿನಿಯರಿಂಗ್ ಓದಿಸೋದು..ದೊಡ್ಡ ಕೆಲಸ.. ಜವಾಬ್ದಾರಿ..!'

'ಅಪೂರ್ವ ನಮ್ಗೆ ಯಾವತ್ತೂ ಪರಕೀಯಳು ಅಂತ ಅನ್ನಿಸಿಲ್ಲ ವಿದ್ಯಾ' ವಿಜಯಮ್ಮ ಅಪೂರ್ವಳ ಪರವಹಿಸಿ ನುಡಿದರು. ವಿದ್ಯಾರ ಮಾತಿಗೆ ಅಪೂರ್ವಳ ಮುಖ ಕಳೆಗುಂದಿತು. ಅದನ್ನು ಸೂಕ್ಷ್ಮವಾಗಿ ಗ್ರಹಿಸಿದ ಆದರ್ಶನೂ ತಾಳದಾದ.

'ಅಮ್ಮಾ.. ಸ್ವಲ್ಪ ಸುಮ್ನಿರ್ತೀಯಾ..?' ಕಣ್ಣಲ್ಲೇ ಗದರಿದ. ಸಂದರ್ಭದ ಬಿಸಿಯರಿತು ಅಪೂರ್ವಳಿಗೆ ಅಲ್ಲಿ ನಿಲ್ಲಲಾಗಲಿಲ್ಲ.

'ನಾನು ಕುಡೀಲಿಕ್ಕೆ ಏನಾದ್ರೂ ತರ್ರೀನಿ..?' ಎಂದು ಅಲ್ಲಿಂದ ಕದಲಿದಳು. ಅವಳು ಪಾನೀಯ ತಯಾರಿಸಿ ತರುವ ವೇಳೆಗೆ ವಿಜಯಮ್ಮ, ನೆರೆಹೊರೆಯರು ಬೆಳಿಗ್ಗೆ ಬಂದಾಗ ಅಪೂರ್ವ ಅವರನ್ನು ನಿರ್ವಹಿಸಿಕೊಂಡ ರೀತಿಯ ಗುಣಗಾನ ಮಾಡುತ್ತಿದ್ದರು.